**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ: DPI-CPI0SATS(SS-)/2/2022-SATS (810764) ದಿನಾಂಕ : 16.05.2023

**::ಸುತ್ತೋಲೆ::**

ವಿಷಯ : ಶಾಲಾ ದಾಖಲಾತಿಯಲ್ಲಿನ (SATS ತಂತ್ರಾಂಶದಲ್ಲಿರುವ) ವಿದ್ಯಾರ್ಥಿಯ ಮಾಹಿತಿಯಂತೆ ಆಧಾರ್ ಕಾರ್ಡ್‌ನಲ್ಲಿ ಸರಿಪಡಿಸುವ ಕುರಿತು.

ಉಲ್ಲೇಖ : 1. ಈ ಕಛೇರಿ ಸುತ್ತೋಲೆ ಸಂಖ್ಯೆ: DPI-CPI0SATS(SS-)/2/2022-SATS, ದಿನಾಂಕ: 28.04.2023.
2.ಈ ಕಛೇರಿ ಸುತ್ತೋಲೆ ಸಂಖ್ಯೆ: DPI-CPI0SATS(SS-)/2/2022-SATS, ದಿನಾಂಕ: 17.02.2023.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1 ರ ಸುತ್ತೋಲೆಯಲ್ಲಿ ವಿವಿಧ ಇಲಾಖೆಗಳ ಯೋಜನೆಗಳಡಿ ವಿದ್ಯಾರ್ಥಿ ವೇತನವನ್ನು ವಿತರಿಸಲು, ವಿವಿಧ ಪ್ರವೇಶ ಪರೀಕ್ಷೆಗಳ ಹಾಜರಾತಿಗೆ ಹಾಗೂ ಇನ್ನಿತರೆ ಸರ್ಕಾರಿ(DBT) ಸೇವೆಗಳನ್ನು/ ಸವಲತ್ತುಗಳನ್ನು ಪಡೆಯಲು, ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳ ಜಾಡು ಹಿಡಿಯಲು SATS ತಂತ್ರಾಂಶದಲ್ಲಿರುವ ವಿದ್ಯಾರ್ಥಿಯ ಹೆಸರನ್ನು ಮಾತ್ರ (ಶಾಲಾ ದಾಖಲಾತಿಯಂತೆ) ವಿದ್ಯಾರ್ಥಿಯ ಆಧಾರ್ ನಲ್ಲಿರುವ ಹೆಸರಿನೊಂದಿಗೆ ಮೌಲ್ಯೀಕರಿಸಲು ತಿಳಿಸಲಾಗಿತ್ತು. ಅದರಂತೆ ಈ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆಯಲ್ಲಿ ಒಂದೇ ವಿದ್ಯಾರ್ಥಿಗೆ ಇನ್ನೊಂದು ಶಾಲೆಯಲ್ಲಿ ಅಥವಾ ಅದೇ ಶಾಲೆಯಲ್ಲಿ ಡ್ಯೂಪ್ಲಿಕೇಟ್ SATS ಸಂಖ್ಯೆಯನ್ನು ಹೊಂದಿರುವುದು ಕಂಡುಬಂದಿದ್ದು. ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗ SATS Login ನಲ್ಲಿ ಅನುಬಂದಿಸಿದೆ, ಈ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಪಟ್ಟ ಶಾಲೆಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಯ ಮೂಲ ವಾಸ್ತವಾಂಶದ ದಾಖಲಾತಿ ಆಧಾರದ ಮೇಲೆ ವಿದ್ಯಾರ್ಥಿಯು ಭೌತಿಕವಾಗಿ ವ್ಯಾಸಂಗ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು ಡ್ಯೂಪ್ಲಿಕೇಟ್ SATS ಸಂಖ್ಯೆಯುಳ್ಳ ವಿದ್ಯಾರ್ಥಿಗಳ ಮಾಹಿತಿಯನ್ನು ತಂತ್ರಾಂಶದಿಂದ ತೆಗೆದುಹಾಕಲು ಉಲ್ಲೇಖ-2 ರ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ.

ಮುಂದುವರೆದು, ಆಧಾರ್ ಮೌಲ್ಯೀಕರಣದ ನಂತರ ಕೆಲವು ವಿದ್ಯಾರ್ಥಿಗಳ ಹೆಸರು ಹೊಂದಾಣಿಕೆಯಾಗುತ್ತಿಲ್ಲದಿರುವುದನ್ನು ಗಮನಿಸಲಾಗಿದೆ. ಆದುದರಿಂದ ಸದರಿ ವಿದ್ಯಾರ್ಥಿಗಳ ಕುರಿತಂತೆ ಈ ಕೆಳಗಿನಂತೆ ಕ್ರಮವಹಿಸಲು ತಿಳಿಸಿದೆ.

1. SATS ತಂತ್ರಾಂಶದಲ್ಲಿರುವ ವಿದ್ಯಾರ್ಥಿಗಳ ಮಾಹಿತಿಯು ಶಾಲೆಯ ಪ್ರವೇಶ ದಾಖಲಾತಿಯಾಗಿದ್ದು (School Admission Register/N0.1 Register) ಇದು ವಿದ್ಯಾರ್ಥಿಯ ಮೂಲ ದಾಖಲೆಯಾಗಿರುತ್ತದೆ. ಆದುದರಿಂದ ಶಾಲಾ ಮುಖ್ಯಶಿಕ್ಷಕರು ಈ ವಿಷಯವನ್ನು ಸದರಿ ವಿದ್ಯಾರ್ಥಿಗಳ ಪೋಷಕರ ಗಮನಕ್ಕೆ ತಂದು ವಿದ್ಯಾರ್ಥಿಗಳ ಆಧಾರ್ ನಲ್ಲಿ ವಿದ್ಯಾರ್ಥಿಗಳ ಹೆಸರನ್ನು ಮಾತ್ರ ಶಾಲಾ ದಾಖಲಾತಿಯಂತೆ ಸರಿಪಡಿಸಲು ತಿಳಿಸುವುದು.
2. ಅದರಂತೆ ಸರಿಪಡಿಸಿ, ನಂತರ ವಿದ್ಯಾರ್ಥಿಗಳ ಹೆಸರನ್ನು ಮತ್ತೊಮ್ಮೆ SATS ತಂತ್ರಾಂಶದೊಂದಿಗೆ ಮೌಲ್ಯೀಕರಿಸುವುದು.
3. ಆಧಾರ್ ಹೊಂದಿರದ ವಿದ್ಯಾರ್ಥಿಗಳಿಗೆ, ಶಾಲಾ ದಾಖಲಾತಿಯಂತೆ ಆಧಾರ್ ಕಾರ್ಡ್ ಪಡೆಯಲು ಪೋಷಕರಿಗೆ ತಿಳಿಸುವುದು, ನಂತರ ತಂತ್ರಾಂಶದಲ್ಲಿ ಮೌಲ್ಯೀಕರಿಸುವುದು.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಶಾಲಾ ಶಿಕ್ಷಣ ಇಲಾಖೆ

ರವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಉಪನಿರ್ದೇಶಕರ ಮೂಲಕ.

3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಅಗತ್ಯ ಕ್ರಮಕ್ಕಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ.

ಪ್ರತಿ ಮಾಹಿತಿಗಾಗಿ,

1. ನಿರ್ದೇಶಕರು(ಪ್ರೌಢ ಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ,ಆಯುಕ್ತರ ಕಛೇರಿ,ಬೆಂಗಳೂರು,
2. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ,ಆಯುಕ್ತರ ಕಛೇರಿ,ಬೆಂಗಳೂರು,
3. ಹಿರಿಯ ಸಹಾಯಕ ನಿರ್ದೇಶಕರು, ADM-2 ವಿಭಾಗ, ಶಾಲಾ ಶಿಕ್ಷಣ ಇಲಾಖೆ,ಆಯುಕ್ತರ ಕಛೇರಿ,ಬೆಂಗಳೂರು,
4. ಕಛೇರಿ ಪ್ರತಿ